136(2)

SATYAVADI Founded 1917 Regd. No. M. 1299

# ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 104] ಶನಿವಾರ 15—12—45 [ಬಿಡಿ ಪ್ರತಿ 3 ಪೈ

## ರೋಂನಲ್ಲಿ ಕಾಳಸಂತೆಖೋರರ ಹರತಾಳ !

### ಸೈನಿಕರಿಗೆ ಯುದ್ಧಾನಂತರದ ಶಿಕ್ಷಣ

ನವದೆಹಲಿ, ಡಿ 15 — ಭಾರತದ ಎಲ್ಲೆಡೆಗಳಲ್ಲಿಯೂ ಸೈನೀಕರಿಗೆ ಯುದ್ಧಾನಂತರದ ಶಿಕ್ಷಣ ಕೇಂದ್ರಗಳನ್ನು ತೆರೆಯಲಾಗಿದೆ. ಸೈನ್ಯದಿಂದ ನಿವೃತ್ತರಾಗುವುದಕ್ಕೆ ಮುಂಚೆ ಸಾವಿರಾರು ಸಿಪಾಯಿಗಳು ಹಲವಾರು ವೃತ್ತಿ ಶಿಕ್ಷಣಗಳನ್ನು ಪಡೆಯುತ್ತಿದ್ದಾರೆ ಆಟೊ ಜಾದಿಸ ಕೇಂದ್ರದಲ್ಲಿ ಸಿಪಾಯಿಗಳಿಗೆ ವ್ಯವಸಾಯ, ಗೃಹ ಕೈಗಾರಿಕೆ ತರಕಾರಿ ಬೇಸಾಯ ಇವನ್ನು ಕಲಿಸಲು ಅಧಿಕಾರಿಗಳು ಶಿಕ್ಷಣ ಪಡೆಯುತ್ತಿದ್ದಾರೆ ಒಂಟಿ ಹಿಡಿನಳಿಗಳಲ್ಲಿ ತರಕಾರಿ ಬೆಳೆಯುವುದು, ಬಾತು ಕೋಳಿ ಮೊಲ ಸಾಕುವುದು ಮುಂತಾದ ಕಸಬುಗಳನ್ನು ಕೈಗೊಳ್ಳಲು ಪರೀಕ್ಷೆಗಳು ನಡೆಯುತ್ತಿವೆ. ಉತ್ತರಗೊಳಿಸಿದ ಮಣ್ಣುಗಳಲ್ಲಿ ಕೆಸೆಯ್ಗೆ ಕ್ಯಾಲಿಕೋ ಮೇಲೆ ಅಚ್ಚಾಹಾಕುವುದು. ಒಣ್ಣು ಹಾಕುವುದು ಸಾಬೂನು ತಯಾರಿ ಮುಂತಾದವನ್ನು ಕಲಿಸಲಾಗುತ್ತಿದೆ. ಈ ಶಿಕ್ಷಣ ಕೇಂದ್ರಗಳಲ್ಲಿ ಪ್ರಮಾಣ ಶಾಲೆಗಳು ಪುಸ್ತಕ ಭಂಡಾರ ವಿವಿಧ ವೃತ್ತಾಂತ ಶಾಲೆಗಳು ಸಿದ್ಧವಾಗಿವೆ. ಅಂದವಾದ ಹೂತೋಟಗಳೂ ಮನೋಹರ ಶಾಲೆಗಳೂ ಸಿದ್ಧವಾಗಿವೆ. ಸೈನಿಕರ ಅಭಿರುಚಿಗೆ ತಕ್ಕ ಶಿಕ್ಷಣ ಕೊಡಲಾಗುತ್ತದೆ.

ಂ ಂ

### ಕಂಟ್ರಾಕ್ಟರ ಗುಮಾಸ್ತೆಗೆ ಕಠಿಣ ಶಿಕ್ಷೆ

ಮದರಾಸು, ಡಿ 15 — ಮದರಾಸಿನ ಟಿತ್ರನ್ಸ್‌ಪೋರ್ಟ್ ಕಂಟ್ರಾಕ್ಟರ ಗುಮಾಸ್ತ ಶ್ರೀ ಡಿ. ವಿ. ಗೋವಿಂದರಾಜಲುನಾಯ್ಡುರವರಿಗೆ ಲಂಚದ ಅಪಾದನೆಯ ಮೇಲೆ ೧ ತಿಂಗಳ ಕಠಿಣ ಶಿಕ್ಷೆ ಮತ್ತು 500 ರೂಪಾಯಿ ದಂಡ ವಿಧಿಸಲಾಯಿತು.

ಆರಾದಿತರು 75 ಎತ್ತಿನಗಾಡಿಗಳಿಗೆ ಬದಲಾಗಿ 150 ಗಾಡಿಗಳನ್ನು ಒದಗಿಸಲಾಗುತ್ತೆಂದು ಸುಳ್ಳು ಲೆಕ್ಕ ಕೊಟ್ಟರೆ ಅದಕ್ಕಾಗಿ 100 ರೂ. ಲಂಚ ಕೊಡುವುದಾಗಿ ವೆಹಿಕಲ್ ಅಸೆಂಬ್ಲಿ ಕಂಡಕ್ಟರಿಗೆ ಹೇಳಿದರು. ಕಂಡಕ್ಟರು ಆಗಲೆಂದು ಒಪ್ಪಿಕೊಂಡು ಪೋಲಿಸಿಗೆ ತಿಳಿಸಿ ಬಿಟ್ಟರು. ಲಂಚವನ್ನು ಕೊಡುತ್ತಿದ್ದಾಗ ಶ್ರೀ ಡಿ. ವಿ. ಗೋವಿಂದರಾಜಲು ನಾಯ್ಡುರವರನ್ನು ದಸ್ತಗಿರಿ ಮಾಡಲಾಯಿತು

.....

### ಚಿಪ್ಪಾ ಬೆಳ್ಳಿ ಧಾರಣೆ

| | |
|---|---|
| ಪುರ್ಣ 1 ಕ್ಕೆ | ರೂ. 56-0-0 |
| ಚಿನ್ನ ತೊಲ 1 ಕ್ಕೆ | 82-0-0 |
| ಬೆಳ್ಳಿ | 1-6-0 |

ಕಾಮನ್ಸ್ ಸಭೆಯಲ್ಲಿ ಮಾರ್ಷಲ್ ಹೇಳಿಕೆ ಪ್ರಕಾರ ಪಾರ್ಲಿಮೆಂಟಿನ ಅಶ್ರಯದಲ್ಲಿ ಭಾರತದ ನಿಯೋಗ ಹೊರಡುವುದು.

ಂ ಂ

ಪುಲಿಯಾದಲ್ಲಿ ಮೂವರು ಯುದ್ಧ ಪಾತಕಿಗಳು ಇರುವರೆಂದೂ ಅವರ ವಿಚಾರಣೆಯಾಗಬೇಕೆಂದೂ ಗೊತ್ತಾಗಿದೆ.

ಂ ಂ

ಹಿಂದೂ ಮಹಾಸಭೆಯ ಮಾಜಿ ಉಪಾಧ್ಯಕ್ಷ ಮದರಾಜನಾಯ್ಡು ಕಾಂಗ್ರೆಸಿಗೆ ಸೇರಿದರು.

ಂ ಂ

ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಟ್ರಿನಿಟಿ ಕಾಲೇಜಿನಲ್ಲಿ ಓದುತ್ತಿರುವ ಮೈಸೂರಿನ ವಿದ್ಯಾರ್ಥಿ ಶ್ರೀ ರಾಜಗೋಪಾಲರು ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಸಂಘದ ಕಾರ್ಯಕಾರಿ ಸಮಿತಿ ಸದಸ್ಯಕ್ಕೆ ಅಧಿಕ ಓಟಿನಿಂದ ಚುನಾಯಿಸಲ್ಪಟ್ಟಿರುವುದಾಗಿ ಗೊತ್ತಾಗಿದೆ.

ಂ ಂ

ಕರಾಚಿಯ ಸಿಂಧ್ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಹಾಜರಾತಿ ಕಾಲದಲ್ಲಿ ಜೈಹಿಂದ್ ಎಂದಿದ್ದನ್ನು ಪ್ರತಿಬಂಧಿಸಿದ್ದಕ್ಕಾಗಿ ವಿದ್ಯಾರ್ಥಿಗಳು ತರಗತಿ ಪರಿತ್ಯಾಗ ಮಾಡಿದರು.

ಂ ಂ

ಸುಭಾಷರ ಫೋಟೋವನ್ನು ಪ್ರದರ್ಶಿಸಕೂಡದೆಂದು ಬರ್ಮಾ ಸರ್ಕಾರದ ಆಜ್ಞೆಯಾಗಿದೆ.

ಂ ಂ

ನಾಗಪುರದಲ್ಲಿ ನಡೆದ ನಿಮ್ನವರ್ಗ ಫೆಡರೇಷನ್‌ನಲ್ಲಿ ನಾವು ಕಾಂಗ್ರೆಸಿನವರಲ್ಲವೆಂದು ಕೋರಿಸುವ ಸಲುವಾಗಿ ಹರಿಜನ ಪೆಟ್ಟಿಗೆಯಾದಿ ಟೋಪಿಗೆ ಬೆಂಕಿಯಿಟ್ಟರು

ಲಂಡನ್ ಡಿ 12— ಈ ದಿನದ ಪ್ರಾತಃಕಾಲ ರೋಂನಿಂದ ಆಶ್ಚರ್ಯಕರವಾದ ಸುದ್ದಿ ಬಂದಿದೆ. ಅದೇನೆಂದರೆ ಕಾಳಸಂತೆಖೋರರು 'ಪೋಲೀಸು ದಸ್ತಗಿರಿ' ಯ ವಿರುದ್ಧವಾಗಿ ಮುಷ್ಕರ ಪ್ರಾರಂಭಿಸಿದ್ದಾರೆ. ಪೋಲೀಸರ ದಸ್ತಗಿರಿಯಿಂದ ತಮ್ಮ ವ್ಯಾಪಾರ ಹಾಳಾಗುತ್ತಿರುವುದೆಂದು ಕಾಳಸಂತೆಖೋರರು ಗಮನಕ್ಕೆ ತಂದಿದ್ದಾರೆ. ಕೆಲವು ವರ್ತಕರು ಮಾರ್ಕೆಟ್ ಬಳಿ ಸಂಚರಿಸಿ ಹರತಾಳ ಪನ್ನಾಚರಿಸಬೇಕೆಂದು ಹೇಳುತ್ತಿದ್ದರು.

ಂ ಂ

ದಿ ಹೇಗ್, ಡಿ 12 — ಹಿಟ್ಲರಿಂದ 'ನೆದರಲೆಂಡಿನ ಜನತೆಗೆ ಫ್ಯೂರರ್' ಎಂದು ಕರೆಯಲ್ಪಟ್ಟಿದ್ದ ಮತ್ತು ಡಚ್ ರಾಷ್ಟ್ರೀಯ ಸಮಿತಿಯ ಸದಸ್ಯರಾದಿಗಳ ಮಾಜಿ ನಾಯಕ ಡಾ || ಏಂಟ್ಜೆಮೆಸರ್ಟ್‌ಗೆ ವಿಶೇಷ ಡಚ್ ನ್ಯಾಯಾಸ್ಥಾನವು ಮರಣದಂಡನೆಯನ್ನು ವಿಧಿಸಿದೆ.

ಂ ಂ

ಕಲ್ಕತ್ತಾ, ಡಿ 12 — ಸೋದಾವುರಹ ಆಶ್ರಮಕ್ಕೆ ಗಾಂಧೀಜೀಗೆ ಲಂಡನ್ನಿಂದ ಟೆಲಿಫೋಬಂತು. ವಿಷಯ ತಿಳಿದಿಲ್ಲ

ಂ ಂ

ಆಜಾದ್ ಫೌಜಿನ ಅಧಿಕಾರಿ ಜ್ಞಾನವಾಜರ ಉಮೇದುವಾರಿಕೆ (ಪಂಜಾಬಿನ ಕ್ಷೇತ್ರ) ಯನ್ನು ಪ್ರತಿಸ್ಪರ್ಧಿಯೊಬ್ಬ ನಿಂತಿದ್ದಕ್ಕಾಗಿ ವಾಪಸು ತೆಗೆದುಕೊಳ್ಳಲಾಗುವುದು.

ಂ ಂ

ಪ್ರತಿಬಂಧಕವಿಲ್ಲದೆ ವ್ಯಾಲಿಸ್ತಾನಿಗೆ ಯಹೂದ್ಯರು ಪ್ರವೇಶಿಸ ಬೇಕೆಂದು ಅಮೇರಿಕಾ ಆಡಳಿತ ವಿದೇಶಾಂಗ ಸಮಿತಿ ನಿರ್ಣಯಿಸಿದೆ.

## ವಿವಿಧ ವೃತ್ತ

ಗಾಂಧೀ—ವೇವಲ್ ಮತ್ತೆ ಕಲ್ಕತ್ತಾದಲ್ಲಿ ಭೇಟಿಯಾಗುವರೆಂದೂ, ಅದಕ್ಕಾಗಿ ಗಾಂಧೀಜೀ ವಿಶ್ವಭಾರತಿ ಪ್ರಯಾಣವನ್ನು ಮುಂದುವರಿಸರುವರೆಂದೂ ತಿಳಿಯಬಂದಿದೆ.

ಂ ಂ

ಆಂಧ್ರ ವಿಶ್ವವಿದ್ಯಾನಿಲಯದ ದ್ವಿತೀಯ ಘಟಿಕೋತ್ಸವ ಸಮಾರಂಭದಲ್ಲಿ ಸರ್ ರೆಡ್ಡಿಯವರು ಮಾತನಾಡುತ್ತಾ ಸರ್ಕಾರಕ್ಕೂ ಕಾಂಗ್ರೆಸಿಗೂ ಘರ್ಷಣೆ ಆಗುವ ಸಂಭವವಿದೆಯೆಂದರು.

ಂ ಂ

ಇದುವರೆಗೆ ಬಂಗಾಳದಲ್ಲಿ 1646 ರಾಜಕೀಯ ಖೈದಿಗಳ ಬಿಡುಗಡೆಯಾಗಿರುವುದಾಗಿ ಪ್ರಕಟವಾಗಿದೆ.

ಂ ಂ

ನಮ್ಮ ವಿಷಯಗಳೂ ಮಾಸ್ಕೋ ಸಮ್ಮೇಳನದಲ್ಲಿ ಸೇರಿರುವ ಪ್ರಯುಕ್ತ ನಮ್ಮ ಪ್ರತಿನಿಧ್ಯಕ್ಕೂ ಬಾಧ್ಯತೆಯಿರುವುದಾಗಿ ಸರ್ವಿಯಾ ನಾಯಕತ್ರಯರಿಗೆ ತಿಳಿಸಿದೆ.

ಂ ಂ

ಇಂಡುನೇಷಿಯನ್ನರಿಗೆ ಸುಮಾತ್ರವ ಬೆಂಬಲವಿರುವುದಾಗಿ ಅಲ್ಲಿಯ ನಾಯಕ ಅಮಿಾಲ್ ತಿಳಿಸಿದ್ದಾರೆ.

ಂ ಂ

ಪ್ರಪಂಚ ಸಂಸ್ಥೆಗೆ ಯುರೋಪಿನ ಸಣ್ಣದೊಂದು ರಾಜ್ಯದಲ್ಲಿ ಕೇಂದ್ರವಿರಬೇಕೆಂದು ಬ್ರಿಟಿಷ್ ಓತ್ತಿ ಹೇಳಿದೆ.

ಂ ಂ

ಸರ್ವಿಯಾದಿಂದ ಸೈನ್ಯಗಳು ಪಾವಸ ಸಾಗಬೇಕೆಂದು ಸರ್ವಿಯಾ ವಿದೇಶಾಂಗ ಮಂತ್ರಿಯು ರಷ್ಯಾ ಅಮೇರಿಕಾ ಬ್ರಿಟನ್ನುಗಳಿಗೆ ತಿಳಿಸಿರುವನು.

ಂ ಂ

ಬ್ರಿಟಿಷ್ ಅಮೇರಿಕಾ ಹಣ ಕಾಸಿನ ಒಪ್ಪಂದದ ಬಗ್ಗೆ ಕಾಮನ್ಸ್ ಸಭೆಯಲ್ಲಿ ಅಂಗೀಕಾರ ದೊರೆತಿದೆ.

ಂ ಂ

ಮುಂದಿನ ವರ್ಷದ ಕೊನೆಯಲ್ಲಿ ಅಮೆರಿಕವು 14 ವ್ಯಾಪಾರ ರಾಷ್ಟ್ರಗಳ ಸಮ್ಮೇಳನವನ್ನು ಕರೆಯುವುದು.

ಂ ಂ

ಜಪಾನ್ ಮೇಲಿನ ಹಶೋಟಿ ಸಂಯುಕ್ತ ಮಿತ್ರ ಮಂಡಳದ ವಶವಿಾಡೀಕೆಂದು ರಷ್ಯಾ ಸೂಚಿಸಿದೆ.

ಲಾಹೋರಿನಲ್ಲಿ ಸಿ. ಐ. ಬಿ.


**AT Opera— From 14-12-45**

**FIGHT TO FINISH**

— featuring —

Jack Mull Hall — Lola Lane — Frankie Doro

**At Ranjit ❁ Sant Tulsi Das**

ವಿಷ್ಣುಪಂತ್ ಪಗ್ನೀಸ್, ಲೀಲಾ ಚಿಟ್ನಿಸ್, ವಾಸಂತಿ ಪಾತ್ರವಹಿಸಿರುವ

**ಸಂತ್ ತುಳಸೀದಾಸ್**



**For Good Printing**

**L. N. Press**

Sriramp:t MYSORE

Edited, Printed and published by M. S. Krishna Rao, at the Satvavadi Press, Chamaraja Agrahar, Mysore


ಅರ್ಥ ಸಾಮಾಜಿಕ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

No. R I- 60/45-46

**ಮೈಸೂರು ಸಿಟಿ ರೇಷನಿಂಗ್**

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಗೋಡೌನ್ ಲೈಸೆನ್ಸ್ ಪಡೆದ ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳು ಸಹಾ 1945 ನೇ ಡಿಸೆಂಬರು ಮಾಹೆ 16 ನೇ ತಾರೀಖು ಭಾನುವಾರ ಮಧ್ಯಾಹ್ನ ನೊಹಡಂ ಹಬ್ಬದ ಪ್ರಯುಕ್ತ ಮುಚ್ಚಲ್ಪಡುತ್ತವೆ.

(ಸಹಿ) ಟಿ. ವಿ. ರೆಡ್ಡಿ
1-12-45 ರೇಷನಿಂಗ್ ಆಫೀಸರ್
ಮೈಸೂರು ಸಿಟಿ


ಹಸಕ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸ
ಶಿವರಾಂಪೇಟೆ ಮೈಸೂರು.


**ಮೈಸೂರು ಸಿಟಿ ಮುನಿಸಿಪಾಲಿಟಿ**

ಮೈ ಸೂ ರು ತಾ || 8-12-45

## ಹರಾಜು ನೋಟೀಸು

ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ಕೃಷ್ಣರಾಜ ವನಂನಲ್ಲಿ ಮೈಸೂರು ಸಿಟಿ ಮುನಿಸಿಪಾಲಿಟಿಯವರು ಕಟ್ಟಿಸಿರುವ 'ಮಾಡಲ್ ಹೌಸೆಸ್' 8 ಮನೆಗಳನ್ನು ಪಬ್ಲಿಕ್ಕಾಗಿ ತಾ || 23-12-45 ನೇ ಭಾನುವಾರ ದಿವಿ 10 ಘಂಟಿಗೆ ಸದರಿ ಮನೆಗಳ ಬಳಿ ಹರಾಜು ಮಾಡಲ್ಪಡುತ್ತದೆ. ಇಷ್ಟವುಳ್ಳವರು ಖುದ್ದು ಹಾಜರಾಗಿ ಹರಾಜಿನಲ್ಲಿ ಸವಾಲ್ ಮಾಡಿ, ಸದರಿ ಮನೆಗಳನ್ನು ಪಡೆಯಬಹುದು. ಹೆಚ್ಚಿನ ವಿಚಾರಗಳನ್ನು ಮುನಿಸಿಪಲ್ ಆಫೀಸಿಗೆ ಬಂದು ತಿಳಿಯಬಹುದು.

(ಸಹಿ) ಆರ್. ಎಲ್. ರಾಜು
ಮುನಿಸಿಪಲ್ ಎಂಜಿನಿಯರ್


ರಕ್ತವರ್ಧಿಗೆ — ಧಾತುಪುಷ್ಟಿಗೆ ಸಂಜೀವನ

**ಶಕ್ತಿ ಸುಧಾ**

ಬೆಲೆ ಡಬ್ಬಿಗೆ ಒಂದು ರೂಪಾಯಿ.

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು